ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/32/2016-17. ದಿನಾಂಕ:27-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಹೊನ್ನೂರ್‌ಸಾಬ್ ತಂದೆ ಲೇಟ್ ಹುಸೇನ್ ಸಾಬ್<br>2)ಹೋನ್ನೂರ್‌ಬೀ ಗಂಡ ಲೇಟ್ ಇಮಾಂಸಾಬ್<br>3)ಪಾತೀಮಾ ಗಂಡ ಲೇಟ್ ಪಕೀರ್‌ಸಾಬ್<br>4)ಖಾಸೀಂಬಿ ಗಂಡ ಲೇಟ್ ಖಾಸೀಂಸಾಬ್<br>ಹಿರೇಕುಂಬಳಕುಂಟೆ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 428. ವಿಸ್ತೀರ್ಣ 8-25. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 428. ವಿಸ್ತೀರ್ಣ 8-25. ಎಕ್ರೆ ಜಮೀನನ್ನು ಸದರಿ ಗ್ರಾಮದ ಹೊನ್ನೂರ್‌ಸಾಬ್ ತಂದೆ ಲೇಟ್ ಹುಸೇನ್ ಸಾಬ್ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಿರೇಕುಂಬಳಕುಂಟೆ ಇವರು ನಮೂನೆ-21 ನೋಟಿಸನ್ನು ದಿನಾಂಕ 17-02-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಂಶವೃಕ್ಷ ಪ್ರಕಾರ ಐದು ಜನ ಮರಣ ಹೊಂದಿದ್ದು ಅವರ ಮರಣ ಪ್ರಮಾಣ ಪತ್ರ ಲಗತ್ತಿಸಿಲ್ಲದ ಕಾರಣ ಹಾಗೂ ಗ್ರಾಮಲೆಕ್ಕಿಗರ ಹೇಳಿಕೆ ಮತ್ತು ಮಹಜರ್ ಪಡೆದಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 15/2015-16. ದಿನಾಂಕ 21-03-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 27-09-2016 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಿರೇಕುಂಬಳಕುಂಟೆ ಗ್ರಾಮದ ಸನಂ 428. ವಿಸ್ತೀರ್ಣ 8-25. ಎಕ್ರೆ ಜಮೀನು ನಮ್ಮ ತಂದೆಯವರಾದ ಪಿಂ,ಹುಸೇನ್‌ಸಾಬ್ ತಂದೆ ಪಕ್ಕೀರಸಾಬ್ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 05-02-1980 ರಂದು ಹಾಗೂ ನಮ್ಮ ತಾಯಿಯವರಾದ ಹುಸೇನ್‌ಬೀ. ಇವರು ದಿನಾಂಕ 10-01-1985 ರಂದು ಹಾಗೂ ನನ್ನ ಒಂದನೇ ತಮ್ಮನಾದ ಇಮಾಂಸಾಬ್ ಇವರು ದಿನಾಂಕ 30-10-2010 ರಂದು ಹಾಗೂ ನನ್ನ ಎರಡನೇ ತಮ್ಮನಾದ ಖಾಸೀಂಸಾಬ್ ಇವರು ದಿನಾಂಕ 28-10-2007 ರಂದು ಹಾಗೂ ಮೂರನೇ ತಮ್ಮನಾದ ಪಕೀರಸಾಬ್ ಇವರು ದಿನಾಂಕ 11-06-2010 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ಪೋತಿವಿರಾಸತ್ ಪ್ರಕಾರ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಮು.ತಿ.ನೋ-2

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 428. ವಿಸ್ತೀರ್ಣ 8–25. ಎಕ್ರೆ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಹೊನ್ನೂರ್‌ಸಾಬ್ ತಂದೆ ಲೇಟ್ ಹುಸೇನ್ ಸಾಬ್. ಹೊನ್ನೂರ್‌ಬೀ ಗಂಡ ಲೇಟ್ ಇಮಾಂಸಾಬ್. ಪಾತೀಮಾ ಗಂಡ ಲೇಟ್ ಪಕೀರ್ ಸಾಬ್. ಖಾಸೀಂಬಿ ಗಂಡ ಲೇಟ್ ಖಾಸೀಂಸಾಬ್, ಹಿರೇಕುಂಬಳಕುಂಟೆ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27–09–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಚೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹೋನ್ನೂರ್ ಸಾಬ್ ತಂದೆ ಲೇಟ್ ಹುಸೇನ್‌ಸಾಬ್ ಹಾಗೂಇತರರು ಹಿರೇಕುಂಬಳಕುಂಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.